

ಮಗುಸ್ನೇಹಿ ಸಮಾಜಕ್ಕಾಗಿ

ಖಾಸಗಿ ಪ್ರಸಾರಕ್ಕಾಗಿ ಮಾತ್ರ

# ಶಿಕ್ಷಣ ಸಂಚಲನ

2018–19 ಸಂಚಿಕೆ–5

## ಸಂಪಾದಕೀಯ:

ಗುಣಾತ್ಮಕ ಶಿಕ್ಷಣ ಮತ್ತು ಮಕ್ಕಳ ರಕ್ಷಣೆಯ ಕ್ಷೇತ್ರದಲ್ಲಿ ಕಳೆದ 25 ವರ್ಷಗಳಲ್ಲಿ ಉಡುಪಿ ಮತ್ತು ದ.ಕ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಾ ಬರುತ್ತಿರುವ ಸಂಸ್ಥೆಯಾಗಿ ಪಡಿಯೂ ಸಮುದಾಯ, ಇಲಾಖೆ, ಮಕ್ಕಳು, ಶಿಕ್ಷಕರು, ಎಸ್.ಡಿ.ಎಮ್.ಸಿ ಮುಂತಾದ ನಿರ್ದಿಷ್ಟ ಗುಂಪುಗಳೊಂದಿಗೆ ಅರಿವು ಕಾರ್ಯಕ್ರಮ, ತರಬೇತಿ, ಸೂಕ್ಷ್ಮಗ್ರಾಹಿಯನ್ನಾಗಿಸುವಿಕೆ, ಸಂಘಟನೆ, ಜಾಥಾ, ವಕಾಲತ್ತು, ವಸ್ತು ಸ್ಥಿತಿ ಅಧ್ಯಯನ, ಮುಂತಾದ ವಿಧಾನಗಳ ಮೂಲಕ ಗುಣಾತ್ಮಕ ಶಿಕ್ಷಣದ ಸಾಕಾರಕ್ಕಾಗಿ ಕಾರ್ಯನಿರ್ವಹಿಸುತ್ತಾ ಬರುತ್ತಿದೆ. ಮೌಲ್ಯಯುತ ಶಿಕ್ಷಣ (ವೆಲೊರೆಡ್) ಪರಿಕಲ್ಪನೆಯ ಸಾಕಾರಕ್ಕಾಗಿ ಸಮುದಾಯ ಸಂಘಟನೆಯೊಂದಿಗೆ ಸೈದ್ಧಾಂತಿಕ ಪರಿಪಕ್ವತೆಯ ಮೂಲಕ ಸಮುದಾಯ ಸಬಲೀಕರಣ ಹಾಗೂ ಶಿಕ್ಷಣದಲ್ಲಿ ಸಮುದಾಯ ಪಾತ್ರದ ಮಹತ್ವವನ್ನು ಸಾಧಿಸಿ ತೋರಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ.

1990ರ ಆರಂಭದ ದಶಕದಲ್ಲಿ ಮೌಲ್ಯಯುತ ಶಿಕ್ಷಣ ಯೋಜನೆಯ ಮೂಲಕ ದಕ್ಷಿಣ ಕನ್ನಡದಲ್ಲಿ ಆರಂಭವಾದ ಪಡಿ 'ಮಾನವೀಯ ಸಮಾಜಕ್ಕಾಗಿ ಶಿಕ್ಷಣ' ಎಂಬ ಧ್ಯೇಯದೊಂದಿಗೆ ಶಿಕ್ಷಣ ವ್ಯವಸ್ಥೆಯಲ್ಲಿದ್ದಂತಹ ಲೋಪದೋಷಗಳನ್ನು ಗುರುತಿಸಿ ಗುಣಾತ್ಮಕ ಶಿಕ್ಷಣ ಮತ್ತು ಎಲ್ಲರಿಗೂ ತಾರತಮ್ಯವಿಲ್ಲದ ಮಗು ಕೇಂದ್ರಿತ ಶಿಕ್ಷಣಕ್ಕಾಗಿ ಸಾಕಷ್ಟು ಪ್ರಯತ್ನಗಳನ್ನು ನಡೆಸಿದೆ ಅದರಲ್ಲೂ ಸಮಾನಾಸಕ್ತರ ಸಂಘಟನೆಯನ್ನು ರೂಪಿಸಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳಾಗಿ ಬೆಳೆಸಿ ಈ ಮೂಲಕ ಉಭಯ ಜಿಲ್ಲೆಗಳಲ್ಲಿ ಶಿಕ್ಷಣಕ್ಕಾಗಿ ದುಡಿಯುವ ಸಂಸ್ಥೆಗಳನ್ನು ಬೆಳೆಸಿ ಮಕ್ಕಳ ಹಕ್ಕುಗಳ ರಕ್ಷಣೆಗೆ ಕಾರ್ಯನಿರ್ವಹಿಸುವಂತೆ ಪ್ರೇರೆಪಿಸುತ್ತಿದೆ. ಶಿಕ್ಷಣದಲ್ಲಿ ನಿರಂತರ ಸಕಾರಾತ್ಮಕ ಬದಲಾವಣೆ ಮತ್ತು ಹೊಸತನದ ಅಳವಡಿಕೆಗೆ ಸಾಕಷ್ಟು ಕಾರ್ಯಾಗಾರ, ತರಬೇತಿ, ಅಧ್ಯಯನ, ವಿಚಾರ ಸಂಕೀರ್ಣಗಳನ್ನು ನಡೆಸುತ್ತಾ ಬರುತ್ತಿದೆ. ಮಕ್ಕಳಿಗೆ ಸಂಬಂಧಿಸಿದ ಕಾಯಿದೆಗಳ ವ್ಯಾಪಕ ಪ್ರಚಾರ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಇಟ್ಟಂತಹ ಹೆಜ್ಜೆಯನ್ನು ದ್ವಿಗುಣಗೊಳಿಸುವ ಅನಿವಾರ್ಯತೆ ಇದೆ. ಮಕ್ಕಳ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ, ಮಕ್ಕಳಿಗೆ ನ್ಯಾಯ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಮಕ್ಕಳು ಮತ್ತು ಶಿಕ್ಷಣ ನಮ್ಮ ಪ್ರಮುಖ ಆದ್ಯತಾ ಕ್ಷೇತ್ರವಾಗಿ ಅದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುವ ಸಂಸ್ಥೆ, ವ್ಯಕ್ತಿಗಳೊಂದಿಗೆ ಸಂಪರ್ಕ ವ್ಯವಸ್ಥೆಗಳ ಉದ್ದೇಶಗಳು ಮಕ್ಕಳು ಮತ್ತು ಶಿಕ್ಷಣದಲ್ಲಿ ಅಭಿವೃದ್ಧಿ ತರುವುದಾಗಿದೆ. ಈ ನಿಟ್ಟಿನಲ್ಲಿ ಮಗುಸ್ನೇಹಿ ಸಮಾಜ ನಿರ್ಮಾಣ ನಮ್ಮ ದೃಢ ಹೆಜ್ಜೆಯಾಗಿದೆ ಮತ್ತು ಅದಕ್ಕಾಗಿ ಕಾರ್ಯಪ್ರವೃತ್ತರಾಗಿ ಆಯ್ದ ಶಾಲೆ ಮತ್ತು ಪಂಚಾಯತುಗಳಲ್ಲಿ ಪ್ರಾಯೋಗಿಕ ನೆಲೆಯಲ್ಲಿ ಮುನ್ನಡಿಯಿಟ್ಟಿದ್ದೇವೆ ಮತ್ತು ಈ ಸಂದರ್ಭದಲ್ಲಿ ನಡೆಸಿದ ಕಾರ್ಯಚಟುವಟಿಕೆಗಳ ಪ್ರಯತ್ನಗಳನ್ನು ಶಿಕ್ಷಣ ಸಂಚಲನದಲ್ಲಿ ದಾಖಲಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇವೆ.







# ಬೆಳ್ಳಿ ಹಬ್ಬದ 25ರ ಸಂಭ್ರಮ

ಪಡಿ–ವೆಲೊರೆಡ್ ಯೋಜನೆಯ (1993–2018) 25 ವರ್ಷದ ಬೆಳ್ಳಿ ಹಬ್ಬದ ಆಚರಣೆಯನ್ನು ಸೆಪ್ಟೆಂಬರ್ 1, 2018 ರಂದು ಡಾನ್ ಬಾಸ್ಕೋ ಹಾಲ್ ಮಂಗಳೂರು ಇಲ್ಲಿ **'ಬೊಳ್ಳಿ'** ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುವ ಮೂಲಕ ಉದ್ಘಾಟಿಸಲಾಯಿತು ಮತ್ತು ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡಗಳ ಪ್ರದರ್ಶನ ನಡೆಯಿತು.









## PADI: 25 years of education reforms

PEARL MARIA D'SOUZA
@Mangaluru

What started as an initiative to imbibe values in students, has grown to save thousands of children from assault and sexual abuse over the past 25 years. It was started as an initiative to educate the educators, evolving into a Child Line later, protecting the rights of children.

The NGO, PADI, which means 'equality' in Tulu, was started in 1993, when Dr Desmond De Abrio and Renni D'Souza and their families saw a need for value-oriented education among primary schoolers. " Democratic values were neglected. There was gender bias in textbooks in pictorial form and in written content," he said. He also saw a need for participative learning, which he said benefitted dalits and SC/ST students too, many of whom were first-generation learners and were not used to learning by heart.

Educators too became a focus, as implementation of interactive classes was the aim. As per coordinator Kasturi, Diploma in Elementary Education (DI.Ed) candidates followed a decade-old curriculum and there was a need for real educators. Hence the organisation began an alternative methodology for teaching. Government formed a committee to change the syllabus. "In association with District Institute of Education and Training (DIET), PADI has trained over 150 educators over the past five years in child psychology, community pulse, and other aspects, to make education relevant to present times," said Renni. In direct intervention with primary schools, PADI has taught at least 700 teachers how to make education activity-oriented.

PADI's Education Resource Centre educates educators. It brings parents and teachers, panchayat members, community-based organisation (SHGs), retired teachers, and school betterment committee members to hold training for teachers and if needed, inform authorities of any child right violations. "ERC members have been effective in reporting many violation cases in Belthangady. They inform school officials or Block Education Officer or Childline in case of alarming dropout rates," said Renni. Once a year, students talk about their problems to the local MLA.

PADI celebrating 'Childline Se Dosti' week programme on missing children with students from various government schools across the city

However, one of the star initiatives of the organisation is the Childline 1098, a city helpline started in 2005 and was extended to the district on the recommendation of Child India Foundation. The helpline has rescued more than 3,000 children from Puttur, Sullia, Belthangady and some even from Udupi, from child abuse, punishment (even at school), harrassment and abandonment. 80 percent of these cases have gotten justice, said Renni.

He believes the government's initiative to implement the Juvenile Justice Act came and Child Welfare Commission and Juvenile Justice Board, is a supportive to child protection system.

Over the years, 2000 JJ Act came and CWC and JJB started. Right To Education, Integrated Child Protection system has started with a separate budget allocated to it, has come into effect, helping the cause.



















# ಶಿಕ್ಷಣ ಸಂಚಲನ



## I. ಮಗುಸ್ನೇಹಿ ಶಾಲಾ ವಾತಾವರಣ ನಿರ್ಮಾಣಕ್ಕಾಗಿ ನಡೆಸಿದ ಪ್ರಯತ್ನಗಳು:

**1. ಮಗುಸ್ನೇಹಿ ಶಾಲೆಗಾಗಿ ಎಸ್.ಡಿ.ಎಮ್.ಸಿ ತರಬೇತಿ :**

52 ಶಾಲೆಗಳ ಮಗುಸ್ನೇಹಿ ಶಾಲಾ ಪರಿಕಲ್ಪನೆಯಲ್ಲಿ ಶಾಲಾ ಮಟ್ಟದ 3ನೇ ಹಂತದ ತರಬೇತಿಯಲ್ಲಿ ಶಾಲಾ ಮಟ್ಟದ ಕುಂದು ಕೊರತೆ ನಿವಾರಣಾ ವ್ಯವಸ್ಥೆಗಳ ಬಗ್ಗೆ ಮತ್ತು ಈ ವ್ಯವಸ್ಥೆಗಳ ಮೇಲ್ವಿಚಾರಣೆ ಬಗ್ಗೆ ಸೆಪ್ಟಂಬರ್‌ನಲ್ಲಿ ತರಬೇತಿ ನೀಡಲಾಯಿತು ಮತ್ತು 4ನೇ ಹಂತದ ತರಬೇತಿಯಲ್ಲಿ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸುವ ಕುರಿತಂತೆ ತರಬೇತಿ ನೀಡಲಾಯಿತು. ತರಬೇತಿಯಲ್ಲಿ ಶಾಲಾಭಿವೃದ್ಧಿ ಯೋಜನೆ, ಸಮುದಾಯ ಸಹಭಾಗಿತ್ವ, ಮೂಲಭೂತ ಸೌಕರ್ಯ, ಮಕ್ಕಳ ಕಲಿಕಾ ಗುಣಮಟ್ಟ ಮತ್ತು ಕುಂದು ಕೊರತೆ ನಿವಾರಣಾ ವ್ಯವಸ್ಥೆಗಳು ಮತ್ತು ಮೇಲ್ವಿಚಾರಣೆ ಬಗ್ಗೆ ಕೈಗೊಳ್ಳಬೇಕಾದ, ಕೈಗೊಂಡಿರುವ, ಅನುಸರಣೆಯಲ್ಲಿರುವ ಪ್ರಗತಿಗಳ ಬಗ್ಗೆ ವಿಮರ್ಶೆಯನ್ನು ಪೆಭ್ರವರಿ ತಿಂಗಳಲ್ಲಿ ನಡೆಸಲಾಯಿತು.



ಎಸ್.ಡಿ.ಎಂ.ಸಿ. ತರಬೇತಿ ಕಾರ್ಯಾಗಾರ

ಬೆಳ್ತಂಗಡಿ: ಪಡಿ ಸಂಸ್ಥೆ ಮಂಗಳೂರು, ಶಿಕ್ಷಣ ಸಂಪನ್ಮೂಲ ಕೇಂದ್ರ ಬೆಳ್ತಂಗಡಿ, ಗ್ರಾಮ ಪಂಚಾಯತು ಉಜಿರೆ ಇವುಗಳ ಆಶ್ರಯದಲ್ಲಿ ಬೆಳ್ತಂಗಡಿ ತಾಲೂಕಿನ ಉಜಿರೆ ಕ್ಲಸ್ಟರ್‌ನ ಎಸ್.ಡಿ.ಎಂ.ಸಿ ಸದಸ್ಯರಿಗೆ ತರಬೇತಿ ಕಾರ್ಯಾಗಾರ ಜ.29 ರಂದು ಉಜಿರೆ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿ ಗ್ರಾ.ಪಂ ಸದಸ್ಯೆ ನೀಲಮ್ಮ ನಡೆಸಿದರು. ಪಡಿ ಸಂಸ್ಥೆಯ ಜಿಲ್ಲಾ ಸಂಯೋಜಕಿ ಕಸ್ತೂರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಣ ಸಂಪನ್ಮೂಲದ ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ, ಉಪಾಧ್ಯಕ್ಷೆ ಸಿ.ಕೆ.ಚಂದ್ರಕಲಾ, ತರಬೇತುದಾರರಾದ ಮಲ್ಲಿಕಾ, ಪಡಿ ಸಂಸ್ಥೆ ಬೆಳ್ತಂಗಡಿಯ ಸಂಯೋಜಕಿ ಚಿಂತನಾ ಉಪಸ್ಥಿತರಿದ್ದರು.

**2. ಎಸ್.ಡಿ.ಎಮ್.ಸಿ ತರಬೇತಿ ಕೈಪಿಡಿ ಸಮಾಲೋಚನಾ ಕಾರ್ಯಾಗಾರ :**

ಕರಡು ಎಸ್.ಡಿ.ಎಮ್.ಸಿ ತರಬೇತಿ ಕೈಪಿಡಿಯನ್ನು ರಚಿಸಿ ಅದನ್ನು ಉತ್ತಮೀಕರಿಸಲು ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಮಾಲೋಚನಾ ಕಾರ್ಯಾಗಾರವನ್ನು ನಡೆಸಲಾಯಿತು. ಕೈಪಿಡಿಯಲ್ಲಿನ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ಮತ್ತು ಎಸ್.ಡಿ.ಎಮ್.ಸಿಯವರ ಕೌಶಲ್ಯವನ್ನು ಹೆಚ್ಚಿಸಲು ಯಾವೆಲ್ಲಾ ಅಂಶಗಳನ್ನು ಅಳವಡಿಸಿಕೊಳ್ಳಬಹುದು ಎಂಬುದರ ಬಗ್ಗೆ ಚರ್ಚಿಸಲಾಯಿತು.



**3. ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡಗಳ ಪ್ರದರ್ಶನ :**

ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡದ ಮೂಲಕ ಮಕ್ಕಳ ಹಕ್ಕುಗಳ ಬಗ್ಗೆ ಜನಸಮುದಾಯಕ್ಕೆ ವಿವಿಧ ವೇದಿಕೆಗಳಲ್ಲಿ ಅರಿವನ್ನು ಮೂಡಿಸಲಾಯಿತು, ಸಮುದಾಯದತ್ತ ಶಾಲೆ, ಶಾಲಾ ವಾರ್ಷಿಕೋತ್ಸವ, ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ, ಸಮುದಾಯ ಕಾರ್ಯಕ್ರಮಗಳಲ್ಲಿ ಮಕ್ಕಳ ಸಮಸ್ಯೆಗಳ ಬಗ್ಗೆ ರಂಗ ಕಲೆಯ ಮೂಲಕ ನಾಟಕ ಪ್ರದರ್ಶನಗಳ ಮೂಲಕ ಅರಿವನ್ನು ಮೂಡಿಸಲಾಯಿತು.



**3. ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡಗಳ ವಿಮರ್ಶೆ :**

ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡಗಳ ತರಬೇತುದಾರರು ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರದ ಪದಾಧಿಕಾರಿಗಳೊಂದಿಗೆ ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡಗಳ ವಿಮರ್ಶೆಯನ್ನು ನಡೆಸಲಾಯಿತು. ಪ್ರಮುಖವಾಗಿ ರಂಗ ತಂಡಗಳ ಪರಿಕಲ್ಪನೆ, ನಿರ್ವಹಣೆ, ವಸ್ತ್ರವಿನ್ಯಾಸ, ಮಕ್ಕಳ ತರಬೇತಿ, ಮುಂತಾದ ವಿಚಾರಗಳ ಕುರಿತು ವಿಮರ್ಶೆ ನಡೆಸಲಾಯಿತು. ರಂಗ ತರಬೇತುದಾರರಾದ, ಬಾಸುಮ ಕೊಡಗು, ಕೃಷ್ಣಪ್ಪ ಬಂಬಿಲ, ಗೋಪಾಲ ಅಂಚನ್, ಮೋಹನ್ ಕಾಳಾವರ, ಮುಖೇಶ್ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರದ ಪದಾಧಿಕಾರಿಗಳು ಉಪಸ್ಥಿತರಿದ್ದರು.



**4. ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕಾರ್ಯಾಗಾರ :**

ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡಗಳು ಈಗಾಗಲೇ ತಮ್ಮ ಪ್ರದರ್ಶನ ನೀಡುತ್ತಾ ಜನ ಜಾಗೃತಿ ಮೂಡಿಸುತ್ತಿದೆ. ಈ







ತಂಡಗಳನ್ನು ಮುಂದಿನ ದಿನಗಳಲ್ಲಿ ಇನ್ನೂ ಪರಿಣಾಮಕಾರಿಯಾಗಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಮುನ್ನಡೆಸಲು ಮತ್ತು ಅದರ ನಿರ್ವಹಣೆ, ತರಬೇತಿ ಮುಂತಾದ ವಿಚಾರಗಳು ಮತ್ತು ಕ್ಲಸ್ಟರ್ ಹಂತದಿಂದ ಶಾಲಾ ಹಂತಕ್ಕೆ ವಿಸ್ತರಿಸುವ ಕಾರ್ಯತಂತ್ರಗಳ ಕುರಿತು ಚರ್ಚಿಸಲಾಯಿಯತು. ಕಾರ್ಯಾಗಾರವನ್ನು ರಂಗ ನಿರ್ದೇಶಕರಾದ ಬಾಸುಮ ಕೊಡಗುರವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಮಗುಸ್ನೇಹಿ ಕೈಪಿಡಿ "ಅಂಕುರ"ವನ್ನು ಬಿಡುಗಡೆಗೊಳಿಸಲಾಯಿತು.





ಮಗು ಸ್ನೇಹಿ ಸಮಾಜದತ್ತ ನಮ್ಮ ನಡಿಗೆ

ಮಕ್ಕಳ ರಂಗ ಕಲಾತಂಡದ ಮೊದಲ ಹೆಜ್ಜೆ

**5. ಜನಪ್ರತಿನಿಧಿಗಳೊಂದಿಗೆ ಮಕ್ಕಳ ಮುಖಾಮುಖಿ ಸಂವಾದ :**

ಯೋಜನಾ ವ್ಯಾಪ್ತಿಯ ಕ್ಲಸ್ಟರ್‌ನ ಶಾಲಾ ಮಕ್ಕಳ ಸಮಸ್ಯೆಗಳನ್ನು ಜನಪ್ರತಿನಿಧಿಗಳೊಂದಿಗೆ ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಲು ಅನುಕೂಲವಾಗುವಂತೆ ನೇರ ಸಂವಾದ ಕಾರ್ಯಕ್ರಮವನ್ನು ಉಡುಪಿ ಮತ್ತು ದ.ಕ ಜಿಲ್ಲೆಯ ಬಂಟ್ವಾಳ, ಪುತ್ತೂರು, ಸುಳ್ಯ, ಕಾರ್ಕಳ, ಬೆಳ್ತಂಗಡಿಗಳಲ್ಲಿ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಂಡು ಮಕ್ಕಳು ತಮ್ಮ ಸಮಸ್ಯೆಗಳನ್ನು ಚರ್ಚಿಸಿದರು. ಮಕ್ಕಳ ಕುರಿತ ಹಲವಾರು ಸಮಸ್ಯೆಗಳು ಪರಿಹರಿಸಲು ನೇರ ಸಂವಾದ ಕಾರ್ಯಕ್ರಮ ನೆರವಾಯಿತು.



ಶಾಲೆಗಳಲ್ಲಿ ಶೌಚಾಲಯ– ಕುಡಿಯುವ ನೀರಿನ ಕೊರತೆ

ಕೊಯ್ಯೂರು ಶಾಲೆಗೆ ಇನ್ನೂ ಬಾರದ ವಿಜ್ಞಾನ ಪಠ್ಯ ಪುಸ್ತಕ

ಮಕ್ಕಳ ಮುಖಾಮುಖಿ ಸಂವಾದ

**6. ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ಸಂವಾದ :**

ಮಗುಸ್ನೇಹಿ ಶಾಲಾ ಪರಿಕಲ್ಪನೆಯ ಪರಿಣಾಮಕಾರಿ ಅನುಷ್ಠಾನದ ಕುರಿತಂತೆ ಶಾಲಾ ಮುಖ್ಯಸ್ಥರು, ಎಸ್.ಡಿ.ಎಮ್.ಸಿ ಸದಸ್ಯರನ್ನೊಳಗೊಂಡಂತೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಮಗುಸ್ನೇಹಿ ಶಾಲಾ ಅನುಷ್ಠಾನದ ಪ್ರಕ್ರಿಯೆಯ ವರದಿಯನ್ನು ಮಂಡಿಸಿ ಮುಂದಿನ ಕಾರ್ಯಯೋಜನೆಗಳ ರೂಪುರೇಷೆಯನ್ನು ನಡೆಸಲಾಯಿತು.



**7. ತಾಲೂಕು ಪಂಚಾಯತು ಕಾರ್ಯನಿರ್ವಾಹಕರೊಂದಿಗೆ ಸಮಾಲೋಚನೆ :**

ಮಗುಸ್ನೇಹಿ ಶಾಲೆ ಮತ್ತು ಮಗುಸ್ನೇಹಿ ಪಂಚಾಯತು ಪರಿಕಲ್ಪನೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಇಲಾಖಾ ಸಹಭಾಗಿತ್ವ ಮತ್ತು ಸಹಕಾರಕ್ಕಾಗಿ ತಾಲೂಕು ಪಂಚಾಯತು ಮುಖ್ಯ ಕಾರ್ಯನಿರ್ವಹಣಧಿಕಾರಿಯೊಂದಿಗೆ ಸಮಾಲೋಚನಾ ಸಭೆಯನ್ನು ಪಡಿ ಯೋಜನಾ ವ್ಯಾಪ್ತಿಯ ತಾಲೂಕುಗಳಲ್ಲಿ ನಡೆಸಲಾಯಿತು. ಪಂಚಾಯತು ಅಭಿವೃದ್ಧಿ ಅಧಿಕಾರಿಗಳು, ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರು, ಹಾಗೂ ತಾಲೂಕು ಪಂಚಾಯತು ಅಧ್ಯಕ್ಷರುಗಳೊಂದಿಗೆ ಮಕ್ಕಳ ರಕ್ಷಣಾ ಸಮಿತಿ ಮತ್ತು ಮಗುಸ್ನೇಹಿ ಪಂಚಾಯತು ಪರಿಕಲ್ಪನೆ ಮತ್ತು ಪಡಿ ನಡೆಸಿದ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಮುಂದಿನ ದಿನಗಳಲ್ಲಿ ಪರಿಣಾಮಕಾರಿ ಕಾರ್ಯಚಟುವಟಿಕೆಯನ್ನು ನಡೆಸುವ ಕುರಿತಂತೆ ಸಂವಾದವನ್ನು ನಡೆಸಲಾಯಿತು.



**8. ಮಗುಸ್ನೇಹಿ ಶಾಲೆಯ ಸೂಚ್ಯಂಕದ ಅನುಷ್ಠಾನ ಮತ್ತು ಮೌಲ್ಯಮಾಪನ :** ಮಗುಸ್ನೇಹಿ ಶಾಲೆಯ ಅನುಷ್ಠಾನಕ್ಕಾಗಿ ರಚಿತವಾದ ಮಗುಸ್ನೇಹಿ ಪರಿಕಲ್ಪನೆಯ ಸೂಚ್ಯಂಕದ ಅನುಷ್ಠಾನಕ್ಕಾಗಿ ಎಸ್.ಡಿ.ಎಮ್.ಸಿಯೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ನಿರಂತರ ಅನುಸರಣೆ ಮತ್ತು









ಸಾಧಿಸಿದ ಕಾರ್ಯಚಟುವಟಿಕೆಗಳ ಅವಲೋಕನ ಮತ್ತು ಮುಂದಿನ ಕಾರ್ಯಯೋಜನೆಗಳ ರೂಪುರೇಷೆಗಳಿಗೆ ಮಾರ್ಗದರ್ಶನ ನೀಡುವುದು, ಮೂಲಭೂತ ಸೌಕರ್ಯಗಳ ಮೌಲ್ಯಮಾಪನ, ಮಕ್ಕಳ ಕಲಿಕಾ ಗುಣಮಟ್ಟದ ವಿಸ್ತರಣೆಗೆ ತಿಂಗಳ ಸಭೆಯಲ್ಲಿ ಚರ್ಚೆ ಮುಂತಾದ ಕಾರ್ಯಕ್ರಮಗಳ ಮೂಲಕ ಎಸ್.ಡಿ.ಎಮ್.ಸಿ ಮೂಲಕ ಮಗುಸ್ನೇಹಿ ವಾತಾವರಣ ನಿರ್ಮಾಣ ಮಾಡುವತ್ತ ಕಾರ್ಯಪ್ರವೃತ್ತವಾಗಿದೆ.



**9. ಮಕ್ಕಳ ರಕ್ಷಣಾ ನೀತಿ 2016ರ ಶಾಲಾ ಹಂತದ ಮಕ್ಕಳ ರಕ್ಷಣಾ ನೀತಿ ತಯಾರಿ ಕಾರ್ಯಾಗಾರ :**

ಉಡುಪಿ ಮತ್ತು ದ.ಕ ಜಿಲ್ಲೆಯ ಯೋಜನಾ ವ್ಯಾಪ್ತಿಯ ಶಾಲೆಗಳಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016ರ ಅನ್ವಯ ರೂಪಿಸಬೇಕಾಗಿರುವ ನೀತಿಯನ್ನು ಹೇಗೆ ತಯಾರಿಸಬಹುದು ಎಂಬುದರ ಬಗ್ಗೆ ಎರಡು ದಿನಗಳ ಪ್ರತ್ಯೇಕ ಕಾರ್ಯಾಗಾರವನ್ನು ನಡೆಸಲಾಯಿತು. ಉಡುಪಿಯಲ್ಲಿ ಮಣಿಪಾಲ ವಿಶ್ವವಿದ್ಯಾನಿಲಯದ ಪ್ರಸನ್ನ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್‌ನ ಸಮಾಜ ಕಾರ್ಯ ವಿಭಾಗದ ಸಹಕಾರದೊಂದಿಗೆ ಕಾರ್ಯಾಗಾರವನ್ನು ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯರಾದ ಶ್ರೀ ಆನಂದ್ ಲೋಬೋರವರು ನಡೆಸಿಕೊಟ್ಟರು ಹಾಗೂ ದ.ಕ ಜಿಲ್ಲೆಯಲ್ಲಿ ಮಕ್ಕಳ ಹಕ್ಕುಗಳ ಟ್ರಸ್ಟ್‌ನ ವಾಸುದೇವ ಶರ್ಮಾರವರು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಾಗಾರ ನಡೆಸಿಕೊಟ್ಟರು. ಕಾರ್ಯಾಗಾರದಲ್ಲಿ ಪಡಿ ಯೋಜನಾ ವ್ಯಾಪ್ತಿಯ 52 ಶಾಲೆಗಳ ಪ್ರತಿನಿಧಿಗಳು ಭಾಗವಹಿಸಿದ್ದು, ಕರಡು ನೀತಿಯನ್ನು ತಮ್ಮ ಶಾಲೆಗಳಿಗನುಗುಣವಾಗಿ ರೂಪಿಸಲು ತರಬೇತಿ ನೀಡಲಾಯಿತು.


ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣಾ ನೀತಿ: ಜಿ.ಮಟ್ಟದ ತರಬೇತಿ

ಸದಸ್ಯರಾದ ಮೋಹನ್ ಕುಮಾರ್, ಅಬ್ದುಲ್ ಸಲಾಂ, ಅಧ್ಯಕ್ಷರು ಎಸ್.ಡಿ.ಎಂ.ಸಿ. ಸಮನ್ವಯ ವೇದಿಕೆ, ಎಲ್ಲಾ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಅಧ್ಯಕ್ಷರು, ಸದಸ್ಯರು, ಜಿಲ್ಲಾ ಮತ್ತು ತಾ। ಸಂಯೋಜಕರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಆನಂದ ಬಿ. ಲೋಬೋ ಕಾರ್ಯಾಗಾರ ನಡೆಸಿದರು.

ಶಿಕ್ಷಣ | ಜಿಲ್ಲಾ ಮಟ್ಟದ ಎರಡು ದಿನಗಳ ಕಾರ್ಯಾಗಾರ
'ಮಕ್ಕಳ ರಕ್ಷಣಾ ನೀತಿ ಪಾಲನೆ ಅಗತ್ಯ'

ಸಮಿತಿ ರಚನೆ

**10. ಶಾಲಾ ಹಂತದ ಮಕ್ಕಳ ರಕ್ಷಣಾ ನೀತಿಯ ರಚನೆ :**

ಶಾಲಾ ಹಂತದಲ್ಲಿ ಎಸ್.ಡಿ.ಎಮ್.ಸಿ ಜೊತೆ ಸೇರಿಕೊಂಡು ಮಕ್ಕಳ ರಕ್ಷಣಾ ನೀತಿಯನ್ನು ಅಂತಿಮೀಕರಣಗೊಳಿಸಲು ತರಬೇತಿ ನೀಡಲಾಯಿತು. ಶಾಲೆಗಳಿಗನುಗುಣವಾಗಿ ಮಕ್ಕಳ ರಕ್ಷಣಾ ಕರಡು ನೀತಿಯನ್ನು ಯೋಜನಾ ವ್ಯಾಪ್ತಿಯ ಶಾಲೆಗಳಲ್ಲಿ ರೂಪಿಸಲಾಯಿತು.

**11. ಮಕ್ಕಳ ಹಕ್ಕುಗಳ ಕ್ಲಬ್‌ನ ಬಲವರ್ಧನೆಗೆ ಚಟುವಟಿಕೆಗಳು :**

ಮಕ್ಕಳಲ್ಲಿ ನಾಯಕತ್ವ ತರಬೇತಿ, ತಿಂಗಳ ಮಾಸಿಕ ಸಭೆ ನಡೆಸುವ ಕುರಿತಂತೆ ಮಕ್ಕಳು ತಾವೇ ಹೇಗೆ ಮಕ್ಕಳ ಹಕ್ಕುಗಳ ಕ್ಲಬ್‌ನ ಚಟುವಟಿಕೆಗಳ ನಿರ್ವಹಣೆ ಮಾಡಬಹುದು ಎಂಬುದರ ಬಗ್ಗೆ ತರಬೇತಿಯನ್ನು ನೀಡಲಾಯಿತು. ಮಕ್ಕಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್‌ಗಳ ಬಲವರ್ಧನೆಗೆ ಶಾಲಾ ಹಂತದಲ್ಲಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು.



**12. ಮಗುಸ್ನೇಹಿ ಪಂಚಾಯತು ನಿರ್ಮಾಣಕ್ಕಾಗಿ ಪಂಚಾಯತು ಸದಸ್ಯರಿಗೆ ತರಬೇತಿ :**

ಮಕ್ಕಳ ಹಕ್ಕುಗಳು, ವಿವಿಧ ಪ್ರಾಧಿಕಾರಗಳು, ಮಕ್ಕಳ ರಕ್ಷಣಾ ವ್ಯವಸ್ಥೆಗಳ ಬಗ್ಗೆ, ಮಕ್ಕಳ ಶಿಕ್ಷಣ ಮತ್ತು ರಕ್ಷಣೆ, ಮಕ್ಕಳ ಭಾಗವಹಿಸುವಿಕೆ ಹಕ್ಕು, ಪಂಚಾಯತು ಹಣಕಾಸು ಮತ್ತು ಶಾಲಾಭಿವೃದ್ಧಿ, ಪಂಚಾಯತು ಸಾಮಾನ್ಯ ಸಭೆ ಮತ್ತು ಮಕ್ಕಳ ಹಕ್ಕುಗಳ ಕುರಿತು 2ನೇ ಮತ್ತು 3ನೇ ಹಂತದ ತರಬೇತಿಯಲ್ಲಿ ಉಡುಪಿ ಮತ್ತು ದ.ಕ ಜಿಲ್ಲೆಯ 15 ಪಂಚಾಯತುಗಳ ಸದಸ್ಯರುಗಳಿಗೆ ತರಬೇತಿಯನ್ನು ನೀಡಲಾಯಿತು. ಮಗುಸ್ನೇಹಿ ಪಂಚಾಯತು ನಿರ್ಮಾಣ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾದ ಯೋಜನೆಗಳ ಬಗ್ಗೆ ತರಬೇತಿ ನೀಡಲಾಯಿತು.









**13. ಮಕ್ಕಳ ರಕ್ಷಣಾ ಸಮಿತಿ ರಚನೆ ಮತ್ತು ಕಾರ್ಯನಿರ್ವಹಣೆಗೆ ತರಬೇತಿ :**

ಮಕ್ಕಳ ರಕ್ಷಣಾ ಸಮಿತಿಯನ್ನು ಪಂಚಾಯತು ಮಟ್ಟದಲ್ಲಿ ರಚಿಸಿ ಆ ಗ್ರಾಮದಲ್ಲಿ ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವ ಸಮಿತಿಯಾಗಿದೆ. ಸರಕಾರದಿಂದ ಹೊರಡಿಸಿದ ಸುತ್ತೂಲೆಯ ಪ್ರಕಾರ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಿ ಪಂಚಾಯತು ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ತರಬೇತಿಯನ್ನು ನೀಡಲಾಯಿತು. ಮಕ್ಕಳ ರಕ್ಷಣಾ ಸಮಿತಿಯ ಜವಾಬ್ದಾರಿಗಳನ್ನು ಮನವರಿಕೆ ಮಾಡಲಾಯಿತು.



**14. ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ :**

ಗ್ರಾಮ ಮಟ್ಟದಲ್ಲಿ ಮಕ್ಕಳ ಸಮಸ್ಯೆಗಳನ್ನು ವ್ಯಕ್ತಪಡಿಸಲು ರೂಪಿಸಲಾದ ವೇದಿಕೆಯೇ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ. ಇದನ್ನು ಪರಿಣಾಮಕಾರಿಯಾಗಿ ನಡೆಸಲು ಪಡಿ ಯೋಜನಾ ವ್ಯಾಪ್ತಿಯ ಪಂಚಾಯತುಗಳಲ್ಲಿ ಸರಕಾರ ಹೊರಡಿಸಿರುವ ಸುತ್ತೋಲೆಯ ಪ್ರಕಾರ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಯನ್ನು ನಡೆಸಲು ಅನೂಕೂಲವಾಗುವಂತೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಮಕ್ಕಳ ಸಮಸ್ಯೆಗಳಿಗೆ ಸೂಕ್ತ ಪರಿಹಾರ ದೊರಕುವಂತೆ ಮತ್ತು ವಿವಿಧ ಇಲಾಖಾ ಪ್ರತಿನಿಧಿಗಳು ಸಕ್ರೀಯವಾಗಿ ಪಾಲ್ಗೊಳ್ಳುವಂತೆ ಮತ್ತು ಮಾದರಿ ಮಕ್ಕಳ ಗ್ರಾಮ ಸಭೆಯನ್ನು ನಡೆಸಲು ತರಬೇತಿಯನ್ನು ನೀಡಲಾಯಿತು. ಮತ್ತು ಯೋಜನಾ ವ್ಯಾಪ್ತಿಯ ಪಂಚಾಯತುಗಳಿಗೆ ಪಡಿಯಿಂದ ತರಬೇತು ಪಡೆದ ಸಂಪನ್ಮೂಲ ವ್ಯಕ್ತಿಗಳು ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಿ ಮಾಹಿತಿಯನ್ನು ನೀಡಿದರು.


ಕಟಕ: ಮಕ್ಕಳ ಗ್ರಾಮಸಭೆ, ಮಾಹಿತಿ ಕಾರ್ಯಾಗಾರ

'ನಮ್ಮ ಬೇಡಿಕೆ ಈಡೇರದಿದ್ದರೆ ಗ್ರಾಮ ಸಭೆ ನಡೆಸುವ ಉದ್ದೇಶವೇನು?' ಕುಡಿಪ್ಪಾಡಿ ಮಕ್ಕಳ ಗ್ರಾಮ ಸಭೆಯಲ್ಲಿ ವಿದ್ಯಾರ್ಥಿಗಳ ಪ್ರಶ್ನೆ

**15. ಮಗುಸ್ನೇಹಿ ಪಂಚಾಯತು ಪರಿಕಲ್ಪನೆಯ ಗೋಡೆ ಬರಹ :**

ಯೋಜನಾ ವ್ಯಾಪ್ತಿಯ ಆಯ್ದ ಪಂಚಾಯತುಗಳಲ್ಲಿ ಮಗುಸ್ನೇಹಿ ಪರಿಕಲ್ಪನೆಯ ಗೋಡೆ ಬರಹದ ಮೂಲಕ ಮಕ್ಕಳ ಹಕ್ಕುಗಳ ಬಗ್ಗೆ ಸಮುದಾಯಕ್ಕೆ ಜಾಗೃತಿ ಮೂಡಿಸಲು ಮಗುಸ್ನೇಹಿ ಗ್ರಾಮ ಪಂಚಾಯತು ಗೋಡೆ ಬರಹವನ್ನು ಚಿತ್ರಾತ್ಮಕ ವಿವರಣೆಯ ಮೂಲಕ ಪಂಚಾಯತುಗಳ ಸಹಭಾಗಿತ್ವದಲ್ಲಿ ನಿರ್ಮಿಸಲಾಯಿತು.



## II. ಡಿ.ಇಎಲ್.ಇಡಿ ಪಠ್ಯಕ್ರಮದಲ್ಲಿನ ಸುಧಾರಣೆ:

**1. ಸಮಾಲೋಚನಾ ಸಭೆ :**

ಡಿ.ಇಎಲ್.ಇಡಿ ಪ್ರವೇಶಿಕೆ ಕೈಪಿಡಿಯು ಅಂತಿಮೀಕರಣಗೊಳಿಸಲು ಡಿ.ಇಎಲ್.ಇಡಿ ಉಪನ್ಯಾಸಕರು ಮತ್ತು ಡಯಟ್‌ನ ಸಹಯೋಗದೊಂದಿಗೆ ಡಿ.ಇಎಲ್.ಇಡಿ ತರಬೇತಿಯ ಆರಂಭಿಕ ಬುನಾದಿಯ ಕಾರ್ಯಾಗಾರದ ಕೈಪಿಡಿ ರಚನೆಯ ಕುರಿತಂತೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಒಳಗೊಳ್ಳಬೇಕಾದ ವಿಷಯ ವಸ್ತುಗಳು ಮತ್ತು ಅಧಿವೇಶನದ ಸವಿಸ್ತಾರವಾದ ಚರ್ಚೆಯೊಂದಿಗೆ ಅಂತಿಮೀಕರಣಗೊಳಿಸಲಾಯಿತು. ಸಮಾಲೋಚನಾ ಸಭೆಯಲ್ಲಿ ದ.ಕ ಜಿಲ್ಲೆಯ ವಿವಿಧ ಡಿ.ಇಎಲ್.ಇಡಿ ಸಂಸ್ಥೆಯು ಉಪನ್ಯಾಸಕರು ಭಾಗವಹಿಸಿದ್ದರು.

**2. ಡಿ.ಇಎಲ್.ಇಡಿ ಪಠ್ಯಕ್ರಮ ಮತ್ತು ಕೋರ್ಸ್‌ನ ಕುರಿತಂತೆ ವಿದ್ಯಾರ್ಥಿ ಮತ್ತು ಉಪನ್ಯಾಸಕರೊಂದಿಗೆ ಸಂವಾದ:**

ದ.ಕ ಮತ್ತು ಉಡುಪಿ ಜಿಲ್ಲೆಯ ಜಿಲ್ಲಾ ಶಿಕ್ಷಣ ಶಿಕ್ಷಕ ತರಬೇತಿ ಸಂಸ್ಥೆಯ ಸಹಕಾರದೊಂದಿಗೆ ಡಿ.ಇಎಲ್.ಇಡಿ ಪಠ್ಯಕ್ರಮದ ವಿಮರ್ಶಾ ಕಾರ್ಯಾಗಾರವನ್ನು ಉಡುಪಿ ಮತ್ತು ದ.ಕ ಜಿಲ್ಲೆಯಲ್ಲಿ ಜಿಲ್ಲಾ ಶಿಕ್ಷಣ ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ ಪ್ರತ್ಯೇಕವಾಗಿ ನಡೆಸಲಾಯಿತು. ಕಾರ್ಯಾಗಾರದಲ್ಲಿ ದ.ಕ ಮತ್ತು ಉಡುಪಿ ಜಿಲ್ಲೆಯ ಡಿ.ಇಎಲ್.ಇಡಿ ಶಿಕ್ಷಣ ಸಂಸ್ಥೆಯ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಡಿ.ಇಎಲ್.ಇಡಿ ಪಠ್ಯಕ್ರಮ ಮತ್ತು ಕೋರ್ಸ್‌ನ ಮುಂದಿನ ಅವಶ್ಯಕತೆಗಳ ಬಗ್ಗೆ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದವನ್ನು ನಡೆಸಲಾಯಿತು ಮುಂದಿನ ದಿನಗಳಲ್ಲಿ ಶಿಕ್ಷಕರ ವೃತ್ತಿಯಲ್ಲಿ ನಿರಂತರ ಜ್ಞಾನಾರ್ಜನೆ ಮತ್ತು ಪಠ್ಯಕ್ರಮ ಹೊರತುಪಡಿಸಿ ಹೇಗೆ ಉತ್ತಮ ಶಿಕ್ಷಕರಾಗಿ

ಬೆಳವಣಿಗೆಯಾಗಬಹುದು ಎಂಬುದರ ಬಗ್ಗೆ ಚರ್ಚೆಗಳನ್ನು ನಡೆಸಲಾಯಿತು. ಮತ್ತು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪ್ರಶ್ನಾವಳಿಯ ಬಗ್ಗೆ ಚರ್ಚಿಸಲಾಯಿತು.



## III. ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಕಾಲತ್ತು ಪ್ರಕ್ರಿಯೆ :

ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯದ 4 ಶೈಕ್ಷಣಿಕ ವಿಭಾಗದ 120 ಶಾಲೆಗಳಲ್ಲಿ ವಸ್ತುಸ್ಥಿತಿ ಅಧ್ಯಯನ ಮತ್ತು ಶಾಲೆಗಳಲ್ಲಿ ಕುಂದುಕೊರತೆ ನಿವಾರಣಾ ವ್ಯವಸ್ಥೆಗಳ ಅಸ್ತಿತ್ವ ಮತ್ತು ತಾಲೂಕು ಮಟ್ಟದಲ್ಲಿ ಶಿಕ್ಷಣ ಹಕ್ಕು ಕೋಶದ ಬಲವರ್ಧನೆಗಾಗಿ ರಾಮನಗರ, ಗುಲ್ಬರ್ಗ, ಬೆಂಗಳೂರು, ಬೆಳಗಾವಿ, ದಾರವಾಡ, ರಾಯಚೂರು ಜಿಲ್ಲೆಗಳಲ್ಲಿ ಎಸ್.ಡಿ.ಎಮ್.ಸಿ ತರಬೇತಿ ಮತ್ತು ಅದರ ಮೂಲಕ ಆರ್.ಟಿ.ಇ ಪ್ರವರ್ತಕರಿಗೆ ತರಬೇತಿ ನೀಡಿ ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಕಾಲತ್ತನ್ನು ಬಲಪಡಿಸುವುದು ಪ್ರಮುಖ ಉದ್ದೇಶವಾಗಿದೆ.

**1. ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ :**

ರಾಮನಗರ, ಗುಲ್ಬರ್ಗ, ಬೆಂಗಳೂರು, ಬೆಳಗಾವಿ, ದಾರವಾಡ, ರಾಯಚೂರು ಜಿಲ್ಲೆಯ 120 ಶಾಲೆಗಳ ಎಸ್.ಡಿ.ಎಮ್.ಸಿಗೆ ತರಬೇತಿಯನ್ನು ನೀಡಲು ಮತ್ತು ಕಾರ್ಯಕ್ರಮ ಆಯೋಜಿಸುವ ಕುರಿತಂತೆ ತರಬೇತಿಯನ್ನು ಪಡಿ ಕಚೇರಿಯಲ್ಲಿ ನೀಡಲಾಯಿತು. ಪ್ರಮುಖವಾಗಿ ಶಿಕ್ಷಣ ಇಲಾಖೆಯ ಅನುಮತಿ ಮತ್ತು ಪ್ರತಿ ಜಿಲ್ಲೆಯಲ್ಲಿ 30 ಶಾಲೆಗಳ ಎಸ್.ಡಿ.ಎಮ್.ಸಿ ಅಧ್ಯಕ್ಷರನ್ನೊಳಗೊಂಡಂತೆ ಕನಿಷ್ಟ 3 ಸದಸ್ಯರನ್ನು ತರಬೇತಿಗೆ ಪಾಲ್ಗೊಳ್ಳುವಂತೆ ಮಾಡಲು ಯಾವ ಕಾರ್ಯತಂತ್ರಗಳನ್ನು ರೂಪಿಸಲು ಮತ್ತು ತರಬೇತಿಯಲ್ಲಿ ಯಾವೆಲ್ಲಾ ವಿಷಯಗಳು ಒಳಗೊಳ್ಳಬೇಕು ಎಂಬುದರ ಬಗ್ಗೆ ತರಬೇತಿಯನ್ನು ನೀಡಲಾಯಿತು.



**2. ಎಸ್.ಡಿ.ಎಮ್.ಸಿ ತರಬೇತಿ :** ರಾಮನಗರ, ಗುಲ್ಬರ್ಗ, ಬೆಂಗಳೂರು, ಬೆಳಗಾವಿ, ದಾರವಾಡ, ರಾಯಚೂರು ಜಿಲ್ಲೆಯ 120 ಶಾಲೆಗಳ ಎಸ್.ಡಿ.ಎಮ್.ಸಿಗೆ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳು ಮಾರ್ಚ್ ತಿಂಗಳಲ್ಲಿ ಆಯಾಯ ಜಿಲ್ಲೆಯಲ್ಲಿ ತರಬೇತಿಯನ್ನು ನೀಡಲಾಯಿತು. ತರಬೇತಿಯಲ್ಲಿ ಸಂಬಂಧಪಟ್ಟ ಶಾಲೆಗಳ ವಸ್ತುಸ್ಥಿತಿ ಅಧ್ಯಯನ ನಮೂನೆಯ ಮೂಲಕ ದತ್ತಾಂಶ ಕಲೆ ಹಾಕಲಾಯಿತು ಮತ್ತು ಎಸ್.ಡಿ.ಎಮ್.ಸಿ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ, ಶಾಲಾ ಕುಂದು ಕೊರತೆ ವ್ಯವಸ್ಥೆಗಳು, ಶಿಕ್ಷಣ ಹಕ್ಕು ಕಾಯಿದೆ, ಶಾಲಾಭಿವೃದ್ಧಿ ಯೋಜನೆ ತಯಾರಿ, ಮಗುಸ್ನೇಹಿ ಶಾಲಾ ವಾತಾವರಣದ ಕುರಿತಂತೆ ತರಬೇತಿಯನ್ನು ಆಯೋಜಿಸಲಾಯಿತು. ಮಕ್ಕಳ ಹಕ್ಕು, ಶಿಕ್ಷಣ ಹಕ್ಕು ಕಾಯಿದೆ, ಮಗುಸ್ನೇಹಿ ಶಾಲೆ, ಕುಂದುಕೊರತೆ ನಿವಾರಣಾ ವ್ಯವಸ್ಥೆಗಳ ಬಗ್ಗೆ ಸಂವಹನ ಪರಿಕರಗಳ ಮೂಲಕ ಶಾಲೆಗಳಲಿ ಜಾಗೃತಿ ಮೂಡಿಸಲು ಕರಪತ್ರ, ಪೋಸ್ಟರ್‌ಗಳನ್ನು ವಿತರಿಸಲಾಯಿತು. ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳಲ್ಲಿ ಆಸಕ್ತಿ ಇರುವವರನ್ನು ಆರ್.ಟಿ.ಇ ಪ್ರವರ್ತಕರಾಗಿ ಆಯ್ಕೆ ಮಾಡಲಾಯಿತು.



**3. ಆರ್.ಟಿ.ಇ ಪ್ರವರ್ತಕರೊಂದಿಗೆ ಸಮಾಲೋಚನೆ ಮತ್ತು ವಿಮರ್ಶೆ :**

ದಿನಾಂಕ. 27.03.2019 ರಂದು ಮಣಿಪಾಲ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಕರ್ನಾಟಕ ಶೈಕ್ಷಣಿಕ 4 ವಿಭಾಗದ ಸುಮಾರು 6 ಜಿಲ್ಲೆಗಳ 40 ಆರ್.ಟಿ.ಎ ಪ್ರವರ್ತಕರೊಂದಿಗೆ ಸಮಾಲೋಚನಾ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಯಲ್ಲಿ ಆರ್.ಟಿ.ಇ ಕಾಯಿದೆಯ ಅನುಷ್ಠಾನಕ್ಕಾಗಿ ಪ್ರವರ್ತಕರು ತಮ್ಮ ಜಿಲ್ಲೆಯ ಶಿಕ್ಷಣ ಹಕ್ಕು ಕಾಯಿದೆಯ ವಸ್ತುಸ್ಥಿತಿಯ ಅಧ್ಯಯನ ಮತ್ತು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಪಾಪ್ಞೆ (ಶಿಕ್ಷಣ ಹಕ್ಕಿಗಾಗಿ ಜನಾಂದೋಲನಾ) ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಚರ್ಚೆ ಮತ್ತು ಕ್ರಿಯಾಯೋಜನೆಯನ್ನು ರೂಪಿಸಲಾಯಿತು.





**4. ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜನಾಂದೋಲನದ ಪಾತ್ರ ರಾಜ್ಯಮಟ್ಟದ ಸಮಾವೇಶ :**

28.03.2019 ರಂದು ಮಣಿಪಾಲ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ರಾಜ್ಯಮಟ್ಟದ ಕಾರ್ಯಾಗಾರವನ್ನು ಇಂಟರ್‍ಯಾಕ್ಟ್ ಬಿಲ್ಡಿಂಗ್‌ನಲ್ಲಿ ಡಾ. ನಿರಂಜನಾರಾಧ್ಯರವರು ನಡೆಸಿಕೊಟ್ಟರು, ಕಾರ್ಯಾಗಾರದಲ್ಲಿ ಎಸ್.ಡಿ.ಎಮ್.ಸಿ ಸಮನ್ವಯ ಸಮಿತಿಯ ರಾಜ್ಯ ಅಧ್ಯಕ್ಷರಾದ ಸಿದ್ದಲಿಂಗಯ್ಯರವರು ಮತ್ತು ಸಮಾಜಕಾರ್ಯ ವಿಭಾಗದ ಲೆನಾ ಆಶೋಕ್‌ರವರು ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ವಿವಿಧ ಜಿಲ್ಲೆಯ ಆರ್.ಟಿ.ಇ ಪ್ರವರ್ತಕರು, ಎಸ್.ಡಿ.ಎಮ್.ಸಿ ಸದಸ್ಯರು, ಶಿಕ್ಷಕ ಸಂಘದ ಪಧಾಧಿಕಾರಿಗಳು, ಎನ್.ಜಿ.ಓ ಪ್ರತಿನಿಧಿಗಳು, ಶಿಕ್ಷಣಾಸಕ್ತರು ಭಾಗವಹಿಸಿ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಶಿಕ್ಷಣದಲ್ಲಿ ಗುಣಾತ್ಮಕತೆ ಮತ್ತು ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನದಲ್ಲಿರುವ ನ್ಯೂನತೆ , ಅದಕ್ಕಾಗಿ ಜನಾಂದೋಲನಗಳ ಪಾತ್ರ, ವಕಾಲತ್ತು ಪ್ರಕ್ರಿಯೆಯ ಕುರಿತು ಚರ್ಚಿಸಲಾಯಿತು. ಡಾ. ನಿರಂಜನಾರಾಧ್ಯರವರು ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನ ಮತ್ತು ಶಾಲೆಗಳ ವಾಸ್ತವ ಸ್ಥಿತಿಯ ಬಗ್ಗೆ ಬೆಳಕು ಚೆಲ್ಲಿದರು.



ಶಿಕ್ಷಣ ಹಕ್ಕು ಕಾಯ್ದೆ – ರಾಜ್ಯಮಟ್ಟದ ಸಮಾವೇಶ

**ಮಕ್ಕಳ ಹಕ್ಕುಗಳಿಗೆ ನ್ಯಾಯ ಒದಗಿಸೋಣ**

ಡಾ। ನಿರಂಜನಾರಾಧ್ಯ

ಅಂತರ್ಜಾಲ ಬಳಕೆ ಜಾಗೃತಿ ಭಿತ್ತಿ ಪುಸ್ತಕ ಅನಾವರಣಗೊಳಿಸಲಾಯಿತು.

ಉಡುಪಿ, ಮಾ. 28: ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 39.8 ಮಕ್ಕಳಿದ್ದಾರೆ. ಬಾಲಕಾರ್ಮಿಕರು, ದೌರ್ಜನ್ಯ, ಆರ್ಥಿಕ ಅಡೆತಡೆಗಳನ್ನು ಮೆಟ್ಟಿನಿಂತು ಮಕ್ಕಳ ಹಕ್ಕುಗಳಿಗೆ ನ್ಯಾಯ ಒದಗಿಸುವ ಕೆಲಸ ಆಗಬೇಕು ಎಂದು ಬೆಂಗಳೂರು ರಾಷ್ಟ್ರೀಯ ಕಾನೂನು ಕಾಲೇಜಿನ ಫೆಲೋ ಡಾ। ನಿರಂಜನಾರಾಧ್ಯ ಹೇಳಿದರು.

ಪಡಿ ಮಂಗಳೂರು, ಸಮಾಜ ಕಾರ್ಯ ವಿಭಾಗ, ಪ್ರಸನ್ನ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ ಮಾಹೆ, ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ದ.ಕ., ಉಡುಪಿ ಸಹಕಾರದೊಂದಿಗೆ ಗುರುವಾರ ಮಣಿಪಾಲ ಕೆಎಂಸಿಯ ಇಂಟರ‍್ಯಾಕ್ಟ್ ಕಟ್ಟಡದಲ್ಲಿ ಜರಗಿದ ಶಿಕ್ಷಣ ಹಕ್ಕು ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ಸಮಾವೇಶದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

**ಮಕ್ಕಳ ರಕ್ಷಣೆ ಅಗತ್ಯ**

ಆರ್‌ಟಿಇ ಒಂದು ದಶಕ ಪೂರೈಸಿದೆ. ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸಬೇಕು. ಅಪೌಷ್ಟಿಕತೆ, ದೌರ್ಜನ್ಯಗಳಿಂದ ರಕ್ಷಿಸಿ ಉತ್ತಮ ಶಿಕ್ಷಣ ನೀಡಬೇಕು ಎಂದರು.

**ತಂತ್ರಜ್ಞಾನದ ತಿಳುವಳಿಕೆಯಿರಲಿ**

ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಮಕ್ಕಳು ಕುಟುಂಬದ ಜತೆಗಿನ ನಂಟು ಕಳೆದುಕೊಳ್ಳುತ್ತಿದ್ದಾರೆ. ತಂತ್ರಜ್ಞಾನವನ್ನು ಹೇಗೆ ಬಳಸಬೇಕು ಎಂಬ ಬಗ್ಗೆ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ತಂತ್ರಜ್ಞಾನಗಳ ವ್ಯಾಮೋಹಕ್ಕೆ ಬೀಳದೆ ಸಾಂಸ್ಕೃತಿಕ, ಸಾಮಾಜಿಕವಾಗಿ ಅವರು ಪಕ್ವವಾಗಬೇಕು ಎಂದರು.

ಮಾಹೆಯ ಪ್ರಸನ್ನ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್‌ನ ಸಮಾಜಕಾರ್ಯ ವಿಭಾಗದ ಮುಖ್ಯಸ್ಥೆ ಡಾ। ಲೆನಾ ಅಶೋಕ್ ಅಧ್ಯಕ್ಷತೆ ವಹಿಸಿದ್ದರು.

ಎಸ್‌ಡಿಎಂಸಿ ಸಮನ್ವಯ ಸಮಿತಿ ಅಧ್ಯಕ್ಷ ಸಿದ್ದಲಿಂಗಪ್ಪ ಮಾತನಾಡಿ, ಸರಕಾರಿ ಶಾಲೆಗಳ ಅಗತ್ಯವಿದ್ದರೂ ಕೆಲವರು ಮುಚ್ಚಲು ಪ್ರೇರೇಪಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ತಳಹದಿಯಲ್ಲಿನೀತಿ, ನಿಯಮಗಳನ್ನು ಕಾಣುತ್ತಿದ್ದೇವೆ. ಪ್ರಜಾಪ್ರಭುತ್ವದ ನೆಲೆಯಲ್ಲಿ ಎಸ್‌ಡಿಎಂಸಿ ಸಂಘಟನೆ ಕಟ್ಟಬೇಕು. ಇದು ಬಲಗೊಂಡಲ್ಲಿ ಶಿಕ್ಷಣ ವ್ಯವಸ್ಥೆ ಬಲಿಷ್ಟಗೊಳ್ಳಲಿದೆ ಎಂದರು.

ಪಡಿ ಸಂಸ್ಥೆಯ ನಿರ್ದೇಶಕ ರೆನ್ನಿ ಡಿ'ಸೋಜಾ ಸ್ವಾಗತಿಸಿ, ಜಯಂತಿ ವಂದಿಸಿದರು. ಜಯವಂತ ರಾವ್

**5. ಪಡಿ ಕಾರ್ಯಚಟುವಟಿಕೆಗಳ ಕುರಿತ ಸಾಕ್ಷ್ಯಚಿತ್ರ :**

ಪಡಿ ತನ್ನ 25 ವರ್ಷಗಳ ಕಾರ್ಯಚಟುವಟಿಕೆಗಳ ಕುರಿತ ಸಾಕ್ಷ್ಯಚಿತ್ರವನ್ನು ಚಿತ್ರೀಕರಿಸಲಾಯಿತು. ಮೌಲ್ಯಯುತ ಶಿಕ್ಷಣ, ಮಕ್ಕಳ ಹಕ್ಕುಗಳ ರಕ್ಷಣೆ, ಮಗುಸ್ನೇಹಿ ವಾತಾವರಣ ಮುಂತಾದ ಪರಿಕಲ್ಪನೆಯ ಅನುಷ್ಠಾನಕ್ಕಾಗಿ ನಡೆಸಿದ ಪ್ರಾಯೋಗಿಕ ಚಟುವಟಿಕೆಗಳನ್ನು ಸಾಕ್ಷ್ಯಚಿತ್ರಗಳ ಮೂಲಕ ದಾಖಲಾತಿಯನ್ನು ಮಾಡಲಾಗುತ್ತಿದೆ.



## IV. ಶಿಕ್ಷಣ ಸಂಪನ್ಮೂಲ ಕೇಂದ್ರಗಳಿಗೆ ತರಬೇತಿ

**1. ಸಾಮಾರ್ಥ್ಯಾಭಿವೃದ್ಧಿ ತರಬೇತಿ :**

ಶಿಕ್ಷಣ ಸಂಪನ್ಮೂಲ ಕೇಂದ್ರದ ಪದಾಧಿಕಾರಿಗಳಿಗೆ ಸಾಮಾರ್ಥ್ಯಾಭಿವೃದ್ಧಿ ತರಬೇತಿಯನ್ನು 8 ಶಿಕ್ಷಣ ಸಂಪನ್ಮೂಲ ಕೇಂದ್ರಗಳಲ್ಲಿ ಮತ್ತು ಒಕ್ಕೂಟಗಳಿಗೆ ವಿವಿಧ ವಿಷಯಗಳ ಮೇಲೆ ತರಬೇತಿಯನ್ನು ನೀಡಲಾಯಿತು. ಪ್ರಮುಖವಾಗಿ ದಾಖಲಾತಿ ನಿರ್ವಹಣೆ, ಸ್ವ ಮೌಲ್ಯಮಾಪನ, ಪ್ರಕರಣಗಳ ಆಧ್ಯಯನ, ಮೌಲ್ಯಮಾಪನ, ಬೈಲಾ, ಕುರಿತು ತರಬೇತಿಯನ್ನು ವಿವಿಧ ಹಂತಗಳಲ್ಲಿ ನೀಡಲಾಯಿತು.



**2. ಅಂತರ್ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಮಾಲೋಚನಾ ಸಭೆ :**

ಉಡುಪಿ ಮತ್ತು ದ.ಕ ಜಿಲ್ಲೆಗಳ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟಗಳ ಜಂಟಿ ಸಭೆಯನ್ನು ನಡೆಸಿ ಮಕ್ಕಳ ಹಕ್ಕು ಮತ್ತು ಗುಣಾತ್ಮಕ ಶಿಕ್ಷಣಕ್ಕಾಗಿ ವಕಾಲತ್ತು ಪ್ರಕ್ರಿಯೆಯನ್ನು ಬಲಪಡಿಸುವುದು ಮತ್ತು ವ್ಯಾಪಕ ಪ್ರಚಾರವನ್ನು ಹೇಗೆ ನಡೆಸಬಹುದು ಎಂಬುದರ ಬಗ್ಗೆ ಕ್ರಿಯಾ ಯೋಜನೆಯನ್ನು ರೂಪಿಸಲಾಯಿತು.



**3. ಸಂಪನ್ಮೂಲ ಕ್ರೂಢೀಕರಣ ಕಾರ್ಯಾಗಾರ :**

ಪಡಿಯು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಆರ್ಥಿಕ ಸಬಲೀಕರಣಕ್ಕಾಗಿ ಆರ್ಥಿಕ ಸಂಪನ್ಮೂಲ ಕ್ರೂಢೀಕರಣದ ವಿವಿಧ ಕಾರ್ಯಯೋಜನೆಗಳ ಕುರಿತು ತರಬೇತಿಯನ್ನು 'ಅಸೋಸಿಯೇಷನ್ ಪಾರ್ ಪಿಸಿಕಲ್ ಡಿಸೆಬಿಲಿಟಿ' ಸಂಸ್ಥೆಯ ಮನಸೂರ್ ಸಂಪನ್ಮೂಲ ವ್ಯಕ್ತಿಯಾಗಿ ಎರಡು ದಿನಗಳ ತರಬೇತಿಯನ್ನು ನಡೆಸಿಕೊಟ್ಟರು. ಪ್ರಮುಖವಾಗಿ ಪ್ರೊಪೊಸಲ್ ಮತ್ತು ಸಂವಹನ ಕೌಶಲ್ಯಗಳ ಕುರಿತು ಹಾಗೂ ಬಹುರಾಷ್ಟ್ರೀಯ







ಕಂಪೆನಿಗಳಲ್ಲಿ ಲಭ್ಯವಿರುವ ಕಂಪೆನಿಗಳ ಸಾಮಾಜಿಕ ಜವಾಬ್ದಾರಿಗಳ ಆರ್ಥಿಕ ನೆರವನ್ನು ಪಡೆಯುವಲ್ಲಿನ ಕಾರ್ಯತಂತ್ರಗಳನ್ನು ವಿವರಿಸಲಾಯಿತು.




**4. ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ :**

ಶಿಕ್ಷಣ ಸಂಪನ್ಮೂಲ ಕೇಂದ್ರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ವಿವಿಧ ತರಬೇತಿಗಳಿಗೆ ತರಬೇತುದಾರರಾಗಿ ಕಾರ್ಯನಿರ್ವಹಿಸುವವರಿಗೆ ತರಬೇತು ಕೌಶಲ್ಯಗಳ ಬಗ್ಗೆ ತರಬೇತಿಯನ್ನು ನೀಡಲಾಯಿತು. ತರಬೇತಿಯಲ್ಲಿ ಪಂಚಾಯತು ರಾಜ್ ಕಾಯಿದೆಯ ಬಗ್ಗೆ ಹಾಗೂ ಸಂವಹನ ಕೌಶಲ್ಯಗಳ ಬಗ್ಗೆ ತರಬೇತಿಯನ್ನು ವಿಲ್ಫ್ರೆಡ್‌ರವರು ನೀಡಿದರು.



**5. ಸಾಮಾಜಿಕ ವಿಶ್ಲೇಷಣೆ ಮತ್ತು ಉದ್ದೇಶಗಳ ಪುನರ್ ವಿಮರ್ಶೆ ಕಾರ್ಯಾಗಾರ :**

ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸ್ಥಾಪನೆಯ ಉದ್ದೇಶ ಮತ್ತು ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳ ವಿಶ್ಲೇಷಣೆಯನ್ನು ನಡೆಸಲಾಯಿತು. ತುಕಾರಾಂ ಎಕ್ಕಾರುರವರು ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯಾಗಾರವನ್ನು ನಡೆಸಿಕೊಟ್ಟರು.



## V. ಎಸ್.ಡಿ.ಎಮ್.ಸಿ ತರಬೇತಿ :

ಸರ್ವಶಿಕ್ಷಣ ಅಭಿಯಾನ ಮತ್ತು ಪಬ್ಲಿಕ್ ಅಫೇರ್ ಸೆಂಟರ್ (ಪ್ಯಾಕ್)ನ ಸಹಯೋಗದಲ್ಲಿ ಪಡಿಯು ದ.ಕ ಜಿಲ್ಲೆಯಲ್ಲಿ 7 ಶಾಲೆಗಳಲ್ಲಿ ಎಸ್.ಡಿಎಮ್.ಸಿ ತರಬೇತಿಯನ್ನು 3 ಹಂತಗಳಲ್ಲಿ ಆಯೋಜಿಸಿದೆ. ಪ್ರಮುಖವಾಗಿ ಎಸ್.ಡಿ.ಎಮ್.ಸಿ ಶಾಲಾಭಿವೃದ್ಧಿಯಲ್ಲಿ ಹೇಗೆ ತೊಡಗಿಸಿಕೊಳ್ಳಬಹುದು ಸ್ಕೋರ್ ಕಾರ್ಡ್‌ನ ಮುಖಾಂತರ ಶಾಲಾಭಿವೃದ್ಧಿಯ ನಿರಂತರ ಮೌಲ್ಯಮಾಪನ ಮಾಡುವುದರ ಬಗ್ಗೆ ತರಬೇತಿಯನ್ನು ನೀಡಲಾಯಿತು.



## VI. ಅಸರ್ ಹೆಲ್ತ್ ಸಮೀಕ್ಷೆ:

ಪ್ರಥಮ್ ಮತ್ತು ಅಸರ್ ಸೆಂಟರ್‌ನ ಸಹಭಾಗಿತ್ವದಲ್ಲಿ ಉಡುಪಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಅಸರ್ ಹೆಲ್ತ್ ಸರ್ವೆಯನ್ನು 60 ಹಳ್ಳಿಗಳಲ್ಲಿ ನಡೆಸುವ ಸಲುವಾಗಿ ಸ್ವಯಂಸೇವಕರಿಗೆ ತರಬೇತಿಯನ್ನು ಪ್ರಸನ್ನ ಸ್ಕೂಲ್ ಅಫ್ ಪಬ್ಲಿಕ್ ಹೆಲ್ತ್, ಮಣಿಪಾಲ ವಿಶ್ವವಿದ್ಯಾಲಯ ಇವರು ಸಹಭಾಗಿತ್ವದಲ್ಲಿ ನಡೆಸಲಾಯಿತು. ಸುಮಾರು 60 ಸ್ವಯಂಸೇವಕರಿಗೆ ಸಮೀಕ್ಷೆಯನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆ ತರಬೇತಿಯನ್ನು 3 ದಿನಗಳ ಕಾಲ ನಡೆಸಲಾಯಿತು. ಮಾರ್ಚ್ ತಿಂಗಳಲ್ಲಿ 60 ಹಳ್ಳಿಗಳ ಆರೋಗ್ಯದ ಕುರಿತ ಸಮೀಕ್ಷೆಯನ್ನು ನಡೆಸಿ ವರದಿಯನ್ನು ಸಲ್ಲಿಸಲಾಯಿತು.



## VII ಮಗುವಿಗಾಗಿ ನೆರವು ಯೋಜನೆ :

ಶಿಕ್ಷಣ ಪಡೆಯಲು ಆರ್ಥಿಕ ತೊಂದರೆಯನ್ನು ಅನುಭವಿಸುತ್ತಿರುವ ಸುಮಾರು 25 ಮಕ್ಕಳನ್ನು ಗುರುತಿಸಿ, ಇವರಿಗೆ ಶ್ರೀ ಸಾಯಿ ಮೆಮೋರಿಯಲ್ ಫಂಡ್ – ಕ್ಲಾಸ್ ಆಫ್ 82 ಸೈಂಟ್ ಎಲೋಷಿಯಸ್ ಕಾಲೇಜ್ ಮತ್ತು ರವಿಚಂದ್ರ ಅಲ್ಲಂಗಲ ರವರು ನೀಡಿದ ಆರ್ಥಿಕ ನೆರವಿನಿಂದ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಧನಸಹಾಯವನ್ನು ಪಡಿಯು ಈ ಮಕ್ಕಳಿಗೆ ನೀಡುತ್ತಿದೆ. ಆರ್ಥಿಕ ನೆರವಿಗಾಗಿ ಮನವಿಗಳು ಬರುತ್ತಿದ್ದು, ದಾನಿಗಳ ನೆರವನ್ನು ಮುಂದಿನ ದಿನಗಳಲ್ಲಿ ಪಡಿಯು ಬಯಸುತ್ತಿದೆ.







## VIII. ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಹಮ್ಮಿಕೊಂಡ ಕಾರ್ಯಕ್ರಮಗಳು.

**1. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ನೂತನ ಕಛೇರಿ ಉದ್ಘಾಟನೆ:**

ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ದ.ಕ ಜಿಲ್ಲೆಯಲ್ಲಿ ತನ್ನ ನೂತನ ಸ್ವಂತ ಕಾರ್ಯಾಲಯದ ಕಛೇರಿಯನ್ನು ಕಂಕನಾಡಿಯ ತೃಪ್ತಿ ಕಾಂಪ್ಲೆಕ್ಸ್‌ನಲ್ಲಿ ತೆರೆಯಲಾಯಿತು.




**2. ರಾಷ್ಟ್ರೀಯ ಮಕ್ಕಳ ರಕ್ಷಣಾ ನೀತಿ ಸಮಾಲೋಚನಾ ಸಭೆ:**

ಕೇಂದ್ರ ಸರಕಾರವು ರೂಪಿಸಲು ಹೊರಟಿರುವ ರಾಷ್ಟ್ರೀಯ ಮಕ್ಕಳ ರಕ್ಷಣಾ ನೀತಿಗೆ ಸಾರ್ವಜನಿಕರಿಂದ ಸಲಹೆಗಳನ್ನು ಅಹ್ವಾನಿಸಿದ್ದು ಸಲಹೆಗಳನ್ನು ಕ್ರೂಢೀಕರಿಸಿ ಮಾನವ ಸಂಪನ್ಮೂಲ ಇಲಾಖೆಗೆ ಕಳುಹಿಸಲು ಸಮಾಲೋಚನಾ ಸಭೆಯು ಕರ್ನಾಟಕ ಥಿಯೋಲಾಜಿಕಲ್ ಕಾಲೇಜು ಇಲ್ಲಿ ನಡೆಯಿತು. ಶಿಕ್ಷಣ ಇಲಾಖೆ, ಎನ್.ಜಿ.ಓ ಪ್ರತಿನಿಧಿಗಳು, ಶಿಕ್ಷಣಾಸಕ್ತರು ಭಾಗವಹಿಸಿ ಕರಡು ಪ್ರತಿಯಲ್ಲಿನ ನೀತಿಗಳ ಬಗ್ಗೆ ಚರ್ಚೆ ನಡೆಸಿ ಕೆಲವೊಂದು ಮಾರ್ಪಾಡು ಮತ್ತು ಸಲಹೆಗಳನ್ನು ಸೂಚಿಸಲಾಯಿತು. ಈ ಸಂದರ್ಭದಲ್ಲಿ ಧನ ಸಂಗ್ರಹಣೆಗಾಗಿ "ಮಕ್ಕಳ ಹಕ್ಕುಗಳ ಅರಿವಿನ ಕ್ಯಾಲೆಂಡರ್"ನ್ನು ಬಿಡುಗಡೆಗೊಳಿಸಲಾಯಿತು.



**3. ಮಕ್ಕಳ ಮಾಸೋತ್ಸವ :**

ಶಿಕ್ಷಣ ಸಂಪನ್ಮೂಲ ಕೇಂದ್ರಗಳು ವರ್ಷಂಪ್ರತಿ ನವೆಂಬರ್ ತಿಂಗಳಲ್ಲಿ ನಡೆಸುವ ಮಕ್ಕಳ ಮಾಸೋತ್ಸವ ಜನಜಾಗೃತಿ ಕಾರ್ಯಕ್ರಮದಲ್ಲಿ ಮಕ್ಕಳ ರಕ್ಷಣಾ ನೀತಿ, ಮಕ್ಕಳ ಹಕ್ಕು, ಫೋಕ್ಸೋ, ತೆರೆದ ಮನೆ ಕಾರ್ಯಕ್ರಮ, ಜನಪ್ರತಿನಿಧಿಗಳೊಂದಿಗೆ ಸಂವಾದ, ಪೋಲಿಸು ಠಾಣೆ ಭೇಟಿ, ಮುಂತಾದ ಕಾರ್ಯಕ್ರಮಗಳ ಮೂಲಕ ಜನಜಾಗೃತಿಯನ್ನು ಮೂಡಿಸಲಾಯಿತು. 8 ತಾಲೂಕುಗಳಲ್ಲಿ ಸುಮಾರು 2000 ಜನರಿಗೆ ವಿವಿಧ ಕಾರ್ಯಕ್ರಮಗಳ ಮೂಲಕ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.



**4. ಅಸರ್ ಸರ್ವೆ :**

ಪ್ರಥಮ್ ಮೈಸೂರ್ ಮತ್ತು ಅಸರ್ ಸೆಂಟರ್ ಇವರುಗಳ ಸಹಭಾಗಿತ್ವದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ(ರಿ)ವು ದ.ಕ ಜಿಲ್ಲೆಯಲ್ಲಿ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಯನ್ನು ನಡೆಸಿ ದ.ಕ ಜಿಲ್ಲೆಯ 30 ಹಳ್ಳಿಗಳನ್ನು ಸಮೀಕ್ಷೆ ಮಾಡಿ ವರದಿಯನ್ನು ಸಲ್ಲಿಸಲಾಯಿತು.



**5. ಮಕ್ಕಳ ಸಂಸತ್ತು :**

ದ.ಕ ಜಿಲ್ಲೆಯಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ(ರಿ) ಮತ್ತು ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರಗಳು,




# ಶಿಕ್ಷಣ ಸಂಚಲನ

ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ ಇವರ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ ಮಕ್ಕಳ ಸಂಸತ್ತು ಕಾರ್ಯಕ್ರಮವನ್ನು ಉಡುಪಿ ಮತ್ತು ದ.ಕ ಜಿಲ್ಲೆಯಲ್ಲಿ ಸಂಘಟಿಸಲಾಯಿತು. ರಾಜ್ಯಮಟ್ಟಕ್ಕೆ 2 ಮಕ್ಕಳನ್ನು ಈ ಸಂಸತ್ತಿನಲ್ಲಿ ಆಯ್ಕೆ ಮಾಡಿ ಕಳುಹಿಸಿಕೊಡಲಾಯಿತು.




**6. ಡಯಟ್‌ನೊಂದಿಗೆ ಪಠ್ಯಕ್ರಮ ಪರಿಶೀಲನಾ ಕಾರ್ಯಾಗಾರ :**

ದ.ಕ ಜಿಲ್ಲೆಯ ಜಿಲ್ಲಾ ಶಿಕ್ಷಣ ಶಿಕ್ಷಕ ತರಬೇತಿ ಸಂಸ್ಥೆಯ ಸಹಯೋಗದೊಂದಿಗೆ ಪಠ್ಯಕ್ರಮ ಪರಿಶೀಲನಾ ಕಾರ್ಯಾಗಾರ ನಡೆಸಲಾಯಿತು. ಈ ಸಮಾಲೋಚನಾ ಸಭೆಯಲ್ಲಿ ಪ್ರಾಥಮಿಕ ಶಾಲಾ ಪಠ್ಯಕ್ರಮದ 4 ಮತ್ತು 5 ನೇ ತರಗತಿಯ ಪಠ್ಯಕಮದ ಬಗ್ಗೆ ಚರ್ಚೆಯನ್ನು ನಡೆಸಿ ಸಲಹೆಗಳನ್ನು ಕಳುಹಿಸಿಕೊಡಲಾಯಿತು.



**7. ಮಗುಸ್ನೇಹಿ ಪರಿಕಲ್ಪನೆಯ ಅನುಷ್ಠಾನ :**

ಉಡುಪಿ ಮತ್ತು ದ.ಕ ಜಿಲ್ಲೆಯಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ತಮ್ಮ ಸ್ವ ಆಸಕ್ತಿಯಿಂದ ಮಗುಸ್ನೇಹಿ ಪರಿಕಲ್ಪನೆಯ ಅನುಷ್ಠಾನಕ್ಕಾಗಿ ಕಾರ್ಯನಿರ್ವಹಿಸುತ್ತಾ ಬರುತ್ತಿದ್ದು ಉಡುಪಿ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರವು ತೆಂಕನಿಡಿಯೂರು ಗ್ರಾಮ ಪಂಚಾಯತು ವ್ಯಾಪ್ತಿಯ 3 ಶಾಲೆಗಳಲ್ಲಿ ಮಗುಸ್ನೇಹಿ ಪರಿಕಲ್ಪನೆಯ ಅನುಷ್ಠಾನಕ್ಕಾಗಿ ಕಾರ್ಯನಿರ್ವಹಿಸುತ್ತಾ ಬರುತ್ತಿದೆ. ಹಾಗೂ ಮಂಗಳೂರು ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರವು ಮೂಡುಶೆಡ್ಡೆ ಶಾಲೆಯನ್ನು ಮಗುಸ್ನೇಹಿ ಶಾಲೆಯನ್ನಾಗಿ ರೂಪಿಸುವಲ್ಲಿ ಕಾರ್ಯಪ್ರವೃತ್ತವಾಗಿದೆ.



**8. ಮಡಿಕೇರಿ ನೆರೆ ಪೀಡಿತ ನಿರಾಶ್ರಿತ ಕೇಂದ್ರಗಳ ಬೇಟಿ ಮತ್ತು ಮಕ್ಕಳ ಸ್ಥಿತಿಗತಿಗಳ ಪರಿಶೀಲನೆ :** ಮಡಿಕೇರಿ ನೆರೆ ಹಾವಳಿಯಿಂದ ಹಾನಿಗೀಡಾದ ಪ್ರದೇಶಗಳಲ್ಲಿ ನಿರಾಶ್ರಿತರಾಗಿ ಆಶ್ರಯ ಪಡೆದ ಕೇಂದ್ರಗಳಿಗೆ ಭೇಟಿ ಮಾಡಿ ವಿವಿಧ ಮೂಲಗಳಿಂದ ಸಂಗ್ರಹಿಸಿದ ಆವಶ್ಯಕ ವಸ್ತುಗಳನ್ನು ಕೇಂದ್ರಗಳಿಗೆ ಶಿಕ್ಷಣ ಸಂಪನ್ಮೂಲ ಕೇಂದ್ರದ ಪದಾಧಿಕಾರಿಗಳು ಭೇಟಿ ನೀಡಿ ಹಸ್ತಾಂತರಿಸಿ ಅಲ್ಲಿನ ಮಕ್ಕಳ ಸ್ಥಿತಿಗತಿ ಅಧ್ಯಯನ ನಡೆಸಲಾಯಿತು. ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಹೆತ್ತವರೊಂದಿಗೆ ಸಮಾಲೋಚನೆಯನ್ನು ನಡೆಸಲಾಯಿತು.





**ನಮ್ಮೊಂದಿಗೆ ಕೈಜೋಡಿಸಿ :**


ಸಾಮಾಜಿಕ ಕಳಕಳಿಯೊಂದಿಗೆ ಸಮಾಜದ ಅಭಿವೃದ್ಧಿಗೆ ಕೊಡುಗೆಯನ್ನು ನೀಡಲು ಬಯಸುವ ಸಹೃದಯಿಗಳಿಗೆ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಇಚ್ಛಿಸುವುದಾದರೆ ನೀವು ನಮ್ಮೊಂದಿಗೆ ಕೈ ಜೋಡಿಸಬಹುದು. ವಿವಿಧ ಚಟುವಟಿಕೆಗಳ ಮೂಲಕ ಸಮುದಾಯವನ್ನು ತಲುಪಲು ಸಹಕಾರ ನೀಡಬಹುದು. ಅಲ್ಲದೆ ಮಕ್ಕಳ ಸಹಾಯವಾಣಿಗೆ ಸ್ವಯಂ ಸೇವಕರಾಗಿಯೂ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸದಸ್ಯರಾಗಿಯೂ ಕಾರ್ಯನಿರ್ವಹಿಸಬಹುದು.

ಪಡಿಯು 'ಸಪೋರ್ಟ್ ಎ ಚೈಲ್ಡ್ (ಮಗುವಿಗಾಗಿ ನೆರವು)' ಎಂಬ ಯೋಜನೆಯ ಮೂಲಕ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಹಣಕಾಸಿನ ನೆರವನ್ನು ಈ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ತಾವೂ ಕೂಡಾ ಹಣಕಾಸಿನ ನೆರವನ್ನು ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ನಮ್ಮ ಸಂಸ್ಥೆಯನ್ನು ಸಂಪರ್ಕಿಸಿ.






# ಮುದ್ರಿಸಲಾದ ಪ್ರಮುಖ ಪ್ರಕಟಣೆಗಳು











ನಿರ್ವಹಣೆ
ರೆನ್ನಿ ಡಿ'ಸೋಜ

ಪ್ರಕಟಣೆ
ದಾಖಲಾತಿ, ಸಂಶೋಧನೆ ಮತ್ತು ತರಬೇತಿ ವಿಭಾಗ, ಪಡಿ

ಸಲಹೆ ಮತ್ತು ಸಹಕಾರ
ಪಡಿ ಬಳಗ



ವಿಳಾಸ : ಗುಣಾತ್ಮಕ ಶಿಕ್ಷಣಕ್ಕಾಗಿ, ಮಗು ಸ್ನೇಹಿ ಸಮಾಜ ನಿರ್ಮಾಣ
ಪಡಿ, ಗಣೇಶ, ಕೊಲಾಸೊ ಆಸ್ಪತ್ರೆಯ ಬಳಿ, 2ನೇ ಅಡ್ಡರಸ್ತೆ, ಬೆಂದೂರುವೆಲ್, ಮಂಗಳೂರು – 02.
ದೂರವಾಣಿ : 0824 – 2439895, www.padivalored.com